ಚುಟುಕು ಸುದ್ದಿ

ರೈತ ದಿನಾಚರಣೆ

ರಾಮನಗರ: ಜಿಲ್ಲಾ ರೈತ ಸಂಘದ ವತಿಯಿಂದ ರಾಷ್ಟ್ರೀಯ ರೈತ ದಿನಾಚರಣೆಯ ಅಂಗವಾಗಿ ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ರೈತ ದಿನಾಚರಣೆ ಆಯೋಜಿಸಲಾಗಿತ್ತು. ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಅವರು ರಾಗಿ ರಾಶಿಗೆ ಪೂಜೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ, ಜಿಲ್ಲಾ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಎ.ಎಲ್. ಬೈರೇಗೌಡ, ಗೌರವಾಧ್ಯಕ್ಷರಾದ ಡಿ. ಎಂ. ಮಾದೇಗೌಡ, ಉಪಾಧ್ಯಕ್ಷರಾದ ಷಡಕ್ಷರಿ, ಕಾರ್ಯಾಧ್ಯಕ್ಷರಾದ ಶ್ರೀನಿವಾಸ್, ಶಿವಕುಮಾರ್, ಬೈರಾಜ್, ಲೋಕೇಶ್ ಟಿ. ಸಿ., ಜಿಲ್ಲಾ ರೈತ ಸಂಘದ ಮಹಿಳಾ ಘಟಕದ ಶೋಭ ಉಪಸ್ಥಿತರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ರಾಮನಗರ: ಉರಗಹಳ್ಳಿ ವಿದ್ಯುತ್ ಉಪಕೇಂದ್ರಗಳ 66/11ಕೆವಿ ಮಾರ್ಗದಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಳ್ಳುವುದರಿಂದ ಕ್ರಷರ್ ಏರಿಯಾ, ನಾಮ್‌ಧಾರಿ, ಅಣ್ಣಹಳ್ಳಿ, ಸೀಬಕಟ್ಟೆ, ಚಿಕ್ಕರಸನಹಳ್ಳಿ, ಮಂಚೇಗೌಡನಪಾಳ್ಯ, ವಡ್ಡರದೊಡ್ಡಿ, ಜಂಗಮರಪಾಳ್ಯ, ಬಿಲ್ಲೆದೊಡ್ಡಿ, ಗೋಪಹಳ್ಳಿ, ಹುಚ್ಚಮ್ಮನದೊಡ್ಡಿ, ಬೆಣ್ಣಹಳ್ಳಿ, ಪಾರೇಗೌಡನಪಾಳ್ಯ, ಶಂಭೇಗೌಡನದೊಡ್ಡಿ ಹಾಗೂ ಸುತ್ತಮುತ್ತಲಿನ ಪ್ರದೇಶನದಲ್ಲಿ ಡಿ. 26ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂನ ರಾಮನಗರ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ತಿಳಿಸಿದ್ದಾರೆ.

ಕೇಬಲ್ ಅಳವಡಿಕೆ ಕಾಮಗಾರಿ

ಚನ್ನಪಟ್ಟಣ: ನಗರ ವ್ಯಾಪ್ತಿಯಲ್ಲಿ ಎಲ್‌ಟಿ ಎಬಿ ಕೇಬಲ್ ಅಳವಡಿಸುವ ಕಾಮಗಾರಿ ಹಮ್ಮಿಕೊಳ್ಳಲಾಗಿದೆ. ಕೆಎಸ್‌ಆರ್‌ಟಿಸಿ ಬಸ್ ಸ್ಟಾಂಡ್, ಚರ್ಚ್ ರೋಡ್, ಆರ್. ಕೆ. ಬಡಾವಣೆ, ಶೆಟ್ಟಿಹಳ್ಳಿ, ಆವರ್ತಪುರ, ಕುವೆಂಪುನಗರ, ವಿವೇಕಾನಂದನಗರ, ಮಂಜುನಾಥನಗರ, ಎ.ಜೆ. ಕಾಲೋನಿ, ಮಂಗಳವಾರಪೇಟೆ, ಬಿ.ಎಂ. ರಸ್ತೆ, ಮಹಾಲಕ್ಷಿ ಬಡಾವಣೆ, ಚಿಕ್ಕಮಳೂರು, ಅನ್ನಪೂರ್ಣೇಶ್ವರಿ ಬಡಾವಣೆ, ಮಾರುತಿ ಬಡಾವಣೆ, ಕೋಟೆ ಮತ್ತು ಗ್ರಾಮೀಣ ಪ್ರದೇಶಗಳಾದ ಗ್ರಾಮ ಪ್ರದೇಶಗಳಿಗೆ ಡಿ. 26ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂನ ಚನ್ನಪಟ್ಟಣ ನಗರ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ತಿಳಿಸಿದ್ದಾರೆ.

ಡೈರಿ ಸಿದ್ಧಪಡಿಸಲು ಅರ್ಜಿ ಆಹ್ವಾನ

ರಾಮನಗರ: ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿ, ಪ್ರಚಾರ ಮತ್ತು ಉತ್ತೇಜನಕ್ಕಾಗಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ಜಿಲ್ಲೆಯ ಪ್ರವಾಸಿ ತಾಣಗಳನ್ನು ಒಳಗೊಂಡಂತೆ ಕ್ಯಾಲೆಂಡರ್ ಹಾಗೂ ಡೈರಿಯನ್ನು ಸಿದ್ಧಪಡಿಸಿ ಸರಬರಾಜು ಮಾಡುವ ಸಂಬಂಧ ಪ್ರತಿ ಕ್ಯಾಲೆಂಡರ್ ಹಾಗೂ ಡೈರಿಯ ಘಟಕ ವೆಚ್ಚವನ್ನು ನೀಡಲು ಅರ್ಜಿ ಆಹ್ವಾನಿಸಲಾಗಿದೆ.ಹೆಚ್ಚಿನ ಮಾಹಿತಿಗೆ ಸಹಾಯಕ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಜಿಲ್ಲಾಧಿಕಾರಿಗಳ ಕಚೇರಿ ಸಂಕೀರ್ಣ, ನೆಲಅಂತಸ್ತು, ರಾಮನಗರ ಈ ಕಚೇರಿಯನ್ನು ಸಂಪರ್ಕಿಸುವಂತೆ ಜಿಲ್ಲಾ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಅವಿರೋಧ ಆಯ್ಕೆಗೆ ಶೇಷಾದ್ರಿ ಧನ್ಯವಾದಾರ್ಪಣೆ | ಸಿಎಂ ಡಿಸಿಎಂ ನೆರವು ಪಡೆಯುವ ಭರವಸೆ

ಪರಿಸರ ಸ್ನೇಹಿ ಮಾದರಿ ನಗರ: ನೂತನ ಅಧ್ಯಕ್ಷರ ವಾಗ್ದಾನ

ಸಂ.ಕ. ಸಮಾಚಾರ, ರಾಮನಗರ

ನಗರಸಭಾ ಅಧ್ಯಕ್ಷ ಸ್ಥಾನ ಸಾಕಷ್ಟು ಸವಾಲುಗಳಿಂದ ಕೂಡಿದ್ದು, ಎಲ್ಲಾ ಸದಸ್ಯರು ಹಾಗೂ ಸಾರ್ವಜನಿಕರ ಸಹಕಾರ, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಶಾಸಕರ ನೆರವಿನಿಂದ ನಗರದ ಎಲ್ಲಾ ಸವಾಲುಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತೇನೆ ಎಂದು ರಾಮನಗರ ನಗರಸಭೆಯ ನೂತನ ಅಧ್ಯಕ್ಷ ಕೆ. ಶೇಷಾದ್ರಿ (ಶಶಿ) ವಾಗ್ದಾನ ನೀಡಿದರು.

ನಗರಸಭೆಗೆ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲಾ ಸದಸ್ಯರು ಪಟ್ಟಣದ ಅಭಿವೃದ್ಧಿಯ ದೃಷ್ಟಿಯಿಂದ ಒತ್ತಾಯ ಮಾಡಿದ್ದರಿಂದಾಗಿ ನಾನು ಅಧ್ಯಕ್ಷ ಸ್ಥಾನವನ್ನು ಒಪ್ಪಿಕೊಂಡಿದ್ದೇನೆ. ನನ್ನನ್ನು ಆಯ್ಕೆಮಾಡಿದ ಎಲ್ಲಾ ಸದಸ್ಯರು, ಪಕ್ಷದ ವರಿಷ್ಠರಿಗೆ ಧನ್ಯವಾದ ಸಲ್ಲಿಸುತ್ತೇನೆ ಎಂದರು.

ರಾಮನಗರದ ಚಿತ್ರಣ ಬದಲಿಸುವುದಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿ. ಹೇಳಿದ್ದಾರೆ. ಅವರ ಸಹಕಾರದಿಂದಾಗಿ ನಗರಕ್ಕೆ ಹೆಚ್ಚಿನ ಅನುದಾನ ತಂದು ಪಟ್ಟಣವನ್ನು ಸ್ವಚ್ಛ ಹಾಗೂ ಪರಿಸರ ಸ್ನೇಹಿ ನಗರವಾಗಿ ರೂಪಿಸುತ್ತೇನೆ. ಎಲ್ಲಾ ವಾರ್ಡಗಳಿಗೂ

ರಸ್ತೆ, ಚರಂಡಿ, ಬೀದಿ ದೀಪ ಸೇರಿದಂತೆ ಹಲವು ರೀತಿಯ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಅರ್ಕಾವತಿ ನದಿ ಅಭಿವೃದ್ಧಿಗೆ 150 ಕೋಟಿ ರೂ. ಹಣ ಬಜೆಟ್‌ನಲ್ಲಿ ಬಿಡುಗಡೆ ಮಾಡಿದೆ. ನಗರ ವ್ಯಾಪ್ತಿಯಲ್ಲಿ ಚರಂಡಿಗಳ ನಿರ್ಮಾಣಕ್ಕೆ 87.50 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದೆ. ರಾಮನಗರದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಬೇಕಾದರೆ 1 ಸಾವಿರ ಕೋಟಿ ಹಣ ಬೇಕಾಗುತ್ತದೆ. ಇಷ್ಟೊಂದು ಹಣ ತರುವುದು ಸವಾಲಿನ ಕೆಲಸ, ಆದರೆ ನಾನು ಸಾಧ್ಯವಾದಷ್ಟು ಅನುದಾನ ತಂದು ನಗರದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಕನಿಷ್ಟ 6 ತಿಂಗಳು ಬೇಕು: ನಗರಸಭೆಯಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಇವುಗಳ ಪರಿಹಾರಕ್ಕೆ ಕನಿಷ್ಟ 6 ತಿಂಗಳ ಕಾಲಾವಕಾಶಬೇಕಿದೆ. ಹಂತ ಹಂತವಾಗಿ ಸಮಸ್ಯೆ ಪರಿಹರಿಸಲಾಗುವುದು. ಈ ಚುನಾವಣೆಯಲ್ಲಿ ವಿರೋಧಪಕ್ಷದವರು ನಮಗೆ ಸಹಕಾರ ನೀಡಿರುವುದು ನಿಜಕ್ಕೂ ಸಂತಸದ ಸಂಗತಿಯಾಗಿದ್ದು, ಅವರ ಬೆಂಬಲವನ್ನು ಪಡೆದು ಪಟ್ಟಣದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು.

ರಾಮನಗರ ನಗರಸಭೆಯ ನೂತನ ಅಧ್ಯಕ್ಷರಾಗಿ ಕೆ. ಶೇಷಾದ್ರಿ ಮತ್ತು ಉಪಾಧ್ಯಕ್ಷರಾಗಿ ಆಯೇಷಾ ಬಾನು ಅವಿರೋಧ ಆಯ್ಕೆಯಾಗಿದ್ದಾರೆ.

ನಗರಸಭೆಯ ಪ್ರಶಸ್ತಿ ಭವನದಲ್ಲಿ ನಡೆದ ಚುನಾವಣೆಯಲ್ಲಿ ಇವರಿಬ್ಬರನ್ನು ಹೊರತು ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಆಗಿದ್ದ ಉಪವಿಭಾಗಾಧಿಕಾರಿ ಬಿನೋಯ್ ಘೋಷಿಸಿದರು.

ಅಧ್ಯಕ್ಷ ಹಾಗೂ ಉಪಾಧ್ಯಕ್ಷ (ಮಹಿಳೆ) ಸ್ಥಾನಗಳು ಸಾಮಾನ್ಯ ವರ್ಗಕ್ಕೆ ಮೀಸಲಿದ್ದವು. ಕಾಂಗ್ರೆಸ್‌ನ ಎಲ್ಲಾ ಸದಸ್ಯರು, ಜೆಡಿಎಸ್‌ನ ಮೂವರು ಸದಸ್ಯರನ್ನು ಹೊರತು ಪಡಿಸಿ ಉಳಿದವರು ಆಯ್ಕೆ ವೇಳೆ ಹಾಜರಿದ್ದರು.

ಕೆ. ಶೇಷಾದ್ರಿ ಆಯ್ಕೆ ಘೋಷಣೆಯಾಗುತ್ತಿದ್ದಂತೆ ಅಪಾರ ಸಂಖ್ಯೆಯಲ್ಲಿ ಜಮಾಯಿಸಿದ್ದ ಅವರ ಅಭಿಮಾನಿಗಳು, ಕಾಂಗ್ರೆಸ್ ಕಾರ್ಯಕರ್ತರು ಮತ್ತು ನಾಗರೀಕರು ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಸಂಭ್ರಮಿಸಿದರು. ಶೇಷಾದ್ರಿ ಅವರು ನಗರಸಭೆಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಪಕ್ಷ, ಜಾತಿ, ಮತ, ವಯಸ್ಸಿನ ಬೇಧವಿಲ್ಲದೆ ನಾಗರೀಕರು, ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಪ್ರಮುಖರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಪ್ರಮುಖ ವ್ಯಾಪಾರಸ್ಥರು ನಗರಸಭೆಗೆ ಆಗಮಿಸಿ ಅಭಿನಂದಿಸಿದರು.

ಶಾಸಕ ಎಚ್.ಎ. ಇಕ್ಬಾಲ್ ಹುಸೇನ್, ಮಾಜಿ ಶಾಸಕ ಸಿ.ಎಂ.ಲಿಂಗಪ್ಪ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷ ಕೆ.ರಾಜು, ರಾಮನಗರ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್ ಮಾಜಿ ಅಧ್ಯಕ್ಷರುಗಳಾದ ಸಿ.ಎನ್.ಆರ್. ವೆಂಕಟೇಶ್, ರಾಜಶೇಖರ್, ಮುರುಳೀಧರ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಮಂಜುನಾಥ್, ಕೆ.ಎಂ.ಎಫ್ ಮಾಜಿ ಅಧ್ಯಕ್ಷ ಪಿ.ನಾಗರಾಜ್, ನಗರಸಭಾ ಸದಸ್ಯರು, ಅಧಿಕಾರಿಗಳು, ಪೌರಕಾರ್ಮಿಕರು ಮುಂತಾದವರು ಭೇಟಿ ಕೊಟ್ಟು ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿದರು.

ಈ ಸಂದರ್ಭದಲ್ಲಿ ನಗರಸಭಾ ಉಪಾಧ್ಯಕ್ಷೆ ಆಯಿಷಾ ಬಾನು, ಪೌರಾಯುಕ್ತ ಡಾ.ಜಯಣ್ಣ ಇದ್ದರು.

ನಡೆದಾಡುವ ದೇವರ ಸ್ಮರಣೆ

ಸಂ.ಕ. ಸಮಾಚಾರ ನೆಲಮಂಗಲ

ಕಾಯಕ ನಿಷ್ಠೆಯಲ್ಲಿ ಲಕ್ಷಾಂತರ ಮಂದಿಯ ಬಾಳಿಗೆ ಬೆಳಕಾಗುವ ಮೂಲಕ ರಾಷ್ಟ್ರ ಮತ್ತು ವಿಶ್ವದ ಗಮನವನ್ನು ಸೆಳೆದದ್ದಿ ಮಹಾನ್ ಚೇತನ ಸಿದ್ದಗಂಗಾ ಮಠದ ಲಿಂಗೈಕ್ಯ ಡಾ. ಶಿವಕುಮಾರ ಮಹಾ ಸ್ವಾಮೀಜಿಗಳ ಸಾಮಾಜಿಕ ಕೊಡುಗೆ ಮಹತ್ತರವಾದದ್ದು ಎಂದು ತುಮಕೂರು ಸಿದ್ದಗಂಗ ಮಠಾಧೀಶರಾದ ಶ್ರೀಸಿದ್ದಲಿಂಗ ಸ್ವಾಮೀಜಿಗಳು ಸ್ಮರಿಸಿದರು.

ನಗರದ ಕವಾಡಿಮಠದ ಶ್ರೀವೀರಭದ್ರಸ್ವಾಮಿ ಪ್ರಾರ್ಥನಾ ಮಂದಿರದಲ್ಲಿ ಆಯೋಜಿಸಿದ್ದ ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿ ಕುರಿತಾದ "ವಿಶ್ವರತ್ನ ಮಹಾಜಂಗಮ" ಗ್ರಂಥ ಲೋಕಾರ್ಪಣೆ ಮತ್ತು ಶಿವತತ್ವ ಚಿಂತನಾ ಗೋಷ್ಠಿ ಉದ್ಘಾಟಿಸಿ ಶ್ರೀಗಳು ಮಾತನಾಡಿದರು.

ಕಾರ್ಯಕ್ರಮವನ್ನು ಸಂಘಟಕರಾದ ಕೆ.ಸಿ.ಅಣ್ಣಪ್ಪ, ಹರೀಶ್ ಹಾಗೂ ಅಭಿನಂದನಾ ಸಮಿತಿ ಪದಾಧಿಕಾರಿಗಳು, ಶ್ರೀಸಿದ್ದಗಂಗಾ ಮಠದ ಹಳೇಯ ವಿದ್ಯರ್ಥಿಗಳು ಮತ್ತು ಅಭಿಮಾನಿಗಳು ಸಂಘಟಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಮಹದೇವ ಬಿದರಿ ಮಾತನಾಡಿದರು.

ಶಿವಗಂಗೆ ಮೇಲಣಗವಿ ಮಠಾಧೀಶರಾದ ಡಾ.ಶ್ರೀಮಲಯ ಶಾಂತಮುನಿ ದೇಶೀಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಹೊನ್ನಮ್ಮ ಗವಿಮಠಾಧೀಶ ಶ್ರೀರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ನೆಲಮಂಗಲ ಪವಾಡ ಶ್ರೀಬಸವಣ್ಣದೇವರಮಠದ ಶ್ರೀಸಿದ್ದಲಿಂಗಸ್ವಾಮೀಜಿ, ಜಗಣ್ಣಯ್ಯ ಮಠದ ಶ್ರೀಚನ್ನಬಸವಸ್ವಾಮೀಜಿ, ಕಂಬಾಳುಮಠದ ಶ್ರೀಚನ್ನವೀರ ಶಿವಾಚಾರ್ಯಸ್ವಾಮೀಜಿ, ಬಂಡೇಮಠದ ಮಹಾಲಿಂಗಸ್ವಾಮೀಜಿ, ಕಾಲುವೆಮಠದ ಇಮ್ಮಡಿ ಶಿವರುದ್ರಸ್ವಾಮೀಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಉಪಾಧ್ಯಕ್ಷ ಬಿ.ಎಸ್.ಸಚ್ಚಿದಾನಂದಮೂರ್ತಿ, ಎನ್.ಎಸ್.ನಟರಾಜು, ಜಿಪಂ ಮಾಜಿ ಅಧ್ಯಕ್ಷ ಮರಿಸ್ವಾಮಿ, ಪೂರ್ಣಿಮಾ ಸುಗ್ಗರಾಜು, ಎನ್.ಬಿ.ದಯಾಶಂಕರ್ ಹಲವರಿದ್ದರು.

ಹಸಿವು ಮುಕ್ತ ಭಾರತ: ಅಕ್ಷಯ ಫೌಂಡೇಶನ್

ಹೊಸಕೋಟೆ: ಹಸಿವಿನಿಂದಾಗಿ ಯಾರು ಕೂಡ ಶಿಕ್ಷಣ ವಂಚಿತರಾಗಬಾರದೆಂಬ ಪರಿಕಲ್ಪನೆ ಹೊಂದಿ ಹಸಿವು ಮುಕ್ತ ಭಾರತದ ಕನಸಿಗಾಗಿ ಅಕ್ಷಯ ಫೌಂಡೇಶನ್ ಸ್ಥಾಪಿಸಲಾಗಿದೆ ಎಂದು ಅಕ್ಷಯ ಫೌಂಡೇಷನ್ ನ ಸಹ ಸಂಸ್ಥಾಪಕರಾದ ಚಂಚಲಪತಿ ದಾಸ್ ತಿಳಿಸಿದರು.

ನಗರದ ಹೊರವಲಯದ ಚೀಮಸಂದ್ರ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾದ ಅಕ್ಷಯ ಫೌಂಡೇಷನ್ ಅಡುಗೆ ಮನೆಗೆ ಚಾಲನೆ ನೀಡಿ ಮಾತನಾಡಿದರು.

ಹಸಿವು ಎಂಬುದು ಮನುಷ್ಯನಿಗೆ ದೊಡ್ಡ ಶತ್ರು ಸವಾಲಾಗಿದೆ. ಇದೇ ಹಸಿವಿನಿಂದ ಹಲವಾರು ಸಮಸ್ಯೆಗಳುಂಟಾಗಿದ್ದು ಅದರಲ್ಲಿಯೂ ಬಡತನ ಇರುವ ಕಡೆ ಹಸಿವು ನೀಗಿಸುವ ಸಲುವಾಗಿ ಸಾಕಷ್ಟು ಮಕ್ಕಳು ಶಿಕ್ಷಣದಿಂದ ವಂಚಿತರಾಗುತಿದ್ದು ಇವರ ಹಸಿವು ನೀಗಿಸಲು ಇಸ್ಕಾನ್ ದೇಗುಲಯದಲ್ಲಿ 24 ವರ್ಷಗಳ ಹಿಂದೆ 1500 ಬಡ ಮಕ್ಕಳ ಮಧ್ಯಾಹ್ನದ ಬಿಸಿಯೂಟ ನೀಡಲು ಪ್ರಾರಂಭಿಸಿದ್ದು ಇಂದು 16 ರಾಜ್ಯಗಳಲ್ಲಿ 24 ಲಕ್ಷ ಮಕ್ಕಳ ಹಸಿವು ನೀಗಿಸಲು ಸಾಧ್ಯವಾಗಿದ್ದು ಸ್ವಚ್ಚ ಪೌಷ್ಟಿಕ ಹಾಗೂ ಬಿಸಿಯಾದ ತಾಜಾ ಆಹಾರವನ್ನು ತಲುಪಿಸುವಲ್ಲಿ ಕೆನರಾ ಬ್ಯಾಂಕ್ ಕೈ ಜೋಡಿಸಿದ್ದು ಅವರಿಗೆ ಧನ್ಯವಾದ ಅರ್ಪಿಸಲಾಗುವುದು ಎಂದರು.

ಶಾಸಕರಾದ ಮಂಜುಳಾ ಅರವಿಂದ ಲಿಂಬಾವಳಿ ಅವರು ಮಾತನಾಡಿ ಬಡವರು ಕೂಲಿ ಕೆಲಸಕ್ಕೆ ತೆರಳಿದ ಸಂದರ್ಭದಲ್ಲಿ ತಮ್ಮ ಜೊತೆ ತಮ್ಮ ಮಕ್ಕಳಿಗೂ ಊಟ ಸಿಗುತ್ತದೆಂಬ ದೃಷ್ಟಿಯಿಂದ ಸಾಕಷ್ಟು ಮಕ್ಕಳನ್ನು ಶಾಲೆಗೆ

ಅಕ್ಷಯ ಪಾತ್ರೆ ಫೌಂಡೇಷನ್ ಅತ್ಯಾಧುನಿಕ ತಂತ್ರಜ್ಞಾನದ ಸುಸಜ್ಜಿತ ಅಡುಗೆ ಮನೆಯನ್ನು ಗಣ್ಯರು ಉದ್ಘಾಟಿಸಿದರು.

ಕಳುಹಿಸುತ್ತಿರಲಿಲ್ಲ ಇದನ್ನು ಗಮನಿಸಿದ ಅಕ್ಷಯ ಪಾತ್ರ ಉತ್ತಮ ಸೇವೆ ನೀಡುತ್ತಿದೆ ಇದರೊಂದಿಗೆ ಸರ್ಕಾರ ಕೂಡ ಬಿಸಿಯೂಟದ' ಜೊತೆಗೆ ಹಾಲು ಮತ್ತು ಚಿಕ್ಕಿಯನ್ನು ನೀಡಿ ಮಕ್ಕಳ ಪೌಷ್ಟಿಕತೆ ಹೆಚ್ಚಳಕ್ಕೆ ಕ್ರಮವಹಿಸಿದೆ ಎಂದರು.

ಕೆನರಾ ಬ್ಯಾಂಕ್ ನ ಸಿ ಇ ಒ ಸತ್ಯನಾರಾಯಣ ರಾಜು ಮಾತನಾಡಿ ಅಕ್ಷಯ ಪಾತ್ರಯ ದೃಷ್ಟಿಕೋನ ಮತ್ತು ಅದರ ಪ್ರಾಯೋಜಕತ್ವ ಗಮನಿಸಿ ಬಹುದೊಡ್ಡ ಕಾರ್ಯಕ್ರಮ ನೀಡಿದ್ದು ನಮ್ಮ ಲಾಭದಲ್ಲಿ ಇದರೊಟ್ಟಿಗೆ ಕೈ ಜೋಡಿಸಲಾಗಿದೆ ಇದಕ್ಕೆಲ್ಲಾ ಗ್ರಾಹಕರ ಸಹಕಾರ ಕಾರಣವೆಂದರು.

ಜಿಲ್ಲಾಪಂಚಾಯತ್ ಸಿ ಇ ಒ ಕೆ ಎಸ್ ಲತಾ ಕುಮಾರಿ ಮಾತನಾಡಿ ಅಕ್ಷಯ ಪೌಂಡೇಷನ್ ಇಂದು 5000 ಜನರಿಗೆ ಆಹಾರ ತಯಾರಿಸುವ ಅತ್ಯಾಧುನಿಕ ತಂತ್ರಜ್ಞಾನದ ಸುಸಜ್ಜಿತ ಅಡುಗೆ ಮನೆ ಸ್ಥಾಪಿಸಿ ಹಸಿವು ಮುಕ್ತ ಭಾರತದ ಗುರಿ ಮತ್ತು ಇತರ ಸೇವೆಗಳು ಶ್ಲಾಘನೀಯ ಎಂದರು.

ಆವಲಹಳ್ಳ ಗ್ರಾ ಪಂ ಅಧ್ಯಕ್ಷೆ ಶಿಲ್ಪ ನಾಗರಾಜ್, ಜಿ ಪಂ ಮುಖ್ಯ ಲೆಕ್ಕಾಧಿಕಾರಿ ಲಲಿತ, ಇ ಒ ವಸಂತ ಕುಮಾರ್, ಪಿ ಡಿ ಒ ನವಿತ ತೇಜು ಗೌಡ, ಕಾರ್ಯದರ್ಶಿ ಅಮರೇಶ್, ಲೆಕ್ಕ ಸಹಾಯಕ ವೇಣುಗೋಪಾಲ್, ಧಾರ್ಮಿಕ ಅಧ್ಯಕ್ಷರಾದ ಗುಣಕರ ರಾಮ್ ದಾಸ್ ಅಕ್ಷಯ ಪೌಂಡೇಷನ್ ಸಿ ಇ ಒ ಶ್ರೀಧರ್ ವೆಂಕಟ್, ಸೇರಿದಂತೆ ಇತರರು ಇದ್ದರು.

ಮಾರತಹಳ್ಳಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ನೂತನ ಶಾಖೆಯನ್ನು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಂ.ವಿ.ರಾವ್ ಉದ್ಘಾಟಿಸಿದರು. ಬ್ಯಾಂಕ್‌ನ ಹೈದರಾಬಾದ್ ವಲಯದ ಮುಖ್ಯಸ್ಥ ದಾರಾಸಿಂಗ್ ನಾಯ್ಕ್, ಬೆಂಗಳೂರು ವಲಯದ ಮುಖ್ಯಸ್ಥ ಕೆ.ಪಾರ್ಥಸಾರತಿ ನಾಯ್ಡು ಮತ್ತಿತರರಿದ್ದರು.

ಮನೆಗಳಿಗೆ ಕನ್ನ-ಆರೋಪಿ ಬಂಧನ

39.62 ಲಕ್ಷ ರೂ.ಮೌಲ್ಯದ ಚಿನ್ನಾಭರಣ ವಶಕ್ಕೆ

ಆರೋಪಿಗಳಿಂದ ವಶಪಡಿಸಿಕೊಂಡ ಚಿನ್ನಾಭರಣಗಳನ್ನು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ಪರಿಶೀಲನೆ ನಡೆಸಿದರು.

ಬೆಂಗಳೂರು: ಮನೆಗಳ ಬೀಗ ಮುರಿದು ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿ 39.62 ಲಕ್ಷ ಮೌಲ್ಯದ 556 ಗ್ರಾಂ ಚಿನ್ನಾಭರಣ ಹಾಗೂ 1 ಕೆ.ಜಿ 200 ಗ್ರಾಂ ಬೆಳ್ಳಿ ಸಾಮಗ್ರಿಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ದಯ